## ಕರ್ನಾಟಕ ವಿಧಾನ ಪರಿಷತ್ತು

**1.** ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 09
**2.** ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)
**3.** ಉತ್ತರಿಸಬೇಕಾದ ದಿನಾಂಕ : 13.02.2024
**4.** ಉತ್ತರಿಸುವ ಸಚಿವರು : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರದ ಗುಜರಿ ಮಾರಾಟದ ಟೆಂಡರ್ ಕಮ್ ಹರಾಜು ಪ್ರಕ್ರಿಯೆಯಲ್ಲಿ ಟೆಂಡರ್‌ನಲ್ಲಿ ಸೇರಿದ, ಕಾರ್ಖಾನೆಯ ಆಡಳಿತ ಮಂಡಳಿಯ ಸಭಾ ನಡವಳಿಗಳಲ್ಲಿ ದಾಖಲಾಗದ ಕಾರ್ಖಾನೆಯ ತಳಪಾಯದ ಕಲ್ಲನ್ನು ಮತ್ತು ಇನ್ನಿತರ ಸಾಮಗ್ರಿಗಳನ್ನು ಆಡಳಿತ ಮಂಡಳಿಯವರು ಕಳ್ಳತನದಿಂದ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಾರ್ಖಾನೆಯ ತಳಪಾಯದ ಕಲ್ಲನ್ನು ಮತ್ತು ಇನ್ನಿತರೆ ಸಾಮಗ್ರಿಗಳನ್ನು ಆಡಳಿತ ಮಂಡಳಿಯವರು ಕಳ್ಳತನದಿಂದ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ಕಾರ್ಖಾನೆಯಲ್ಲಿ ತುಕ್ಕು ಹಿಡಿದು ಹಾಳಾಗುತ್ತಿರುವ ಹಳೆಯ ಯಂತ್ರೋಪಕರಣಗಳು ಮತ್ತು ನಿರುಪಯುಕ್ತ ಸಾಮಗ್ರಿಗಳನ್ನು ಟೆಂಡರ್ ಕಂ ಹರಾಜು ಮೂಲಕ 'ಎಲ್ಲಿದೆಯೋ, ಹೇಗಿದೆಯೋ ಹಾಗೆ' (As is where is basis) ಮಾರಾಟ ಮಾಡಲಾಗಿರುತ್ತದೆ. ಆದ್ದರಿಂದ, ಖರೀದಿದಾರರು ಕಾರ್ಖಾನೆಯ ಕಟ್ಟಡ ಸಾಮಗ್ರಿಗಳು ಮತ್ತು ಯಂತ್ರೋಪಕರಣಗಳನ್ನು ಸಂಪೂರ್ಣವಾಗಿ ಕಳಚಿ ತೆಗೆದುಕೊಂಡು ಹೋಗಿರುತ್ತಾರೆ. |
| (ಆ) | ಟೆಂಡರ್ ಪಡೆದ ಗುತ್ತಿಗೆದಾರ ನ್ಯೂ ಡಯಲ್ ಟ್ರೇಡರ್ಸ್‌ನಲ್ಲಿ ಮತ್ತು ಆಡಳಿತ ಮಂಡಳಿಯ ಸಭೆಯ ಸಭಾ ನಡವಳಿಗಳಲ್ಲಿ ಸೇರದ ೪ ಕೋಟಿಗೂ ಹೆಚ್ಚಿನ ವಂಚನೆಯ ಭಾಗವನ್ನು ತನಗೆ ನೀಡಿಲ್ಲವೆಂದು ಕಾನೂನು ತಜ್ಞರಿಂದ ಕಾರ್ಖಾನೆಗೆ ನೋಟಿಸು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬ್ರಹ್ಮಾವರ ಇದರ ಕಟ್ಟಡ ಮತ್ತು ಯಂತ್ರೋಪಕರಣಗಳನ್ನು ಟೆಂಡರ್ ಕಂ ಹರಾಜು ಮೂಲಕ ಖರೀದಿಸಿರುವ ಗುತ್ತಿಗೆದಾರರಾದ ಮೆ॥ನ್ಯೂರಾಯಲ್ ಟ್ರೇಡರ್ಸ್, ಚೆನ್ನೈ ಇವರಿಂದ ಕಾರ್ಖಾನೆಗೆ ಬರತಕ್ಕ ಜಿಎಸ್‌ಟಿ ಮತ್ತಿತರೆ ಬಾಬ್ತು ರೂ.2.27 ಕೋಟಿಗಳ ಮೊತ್ತದ ವಸೂಲಾತಿಗೆ ಸಂಬಂಧಿಸಿದಂತೆ ದಿನಾಂಕ:02.09.2022ರಂದು ಜರುಗಿದ ಕಾರ್ಖಾನೆಯ ಆಡಳಿತ ಮಂಡಳಿ ಸಭೆಯ ನಿರ್ಣಯದಂತೆ ಕಾರ್ಖಾನೆಯು ವಕೀಲರ ಮೂಲಕ ದಿನಾಂಕ:17.11.2022 ರಂದು ಲೀಗಲ್ ನೋಟಿಸು ಜಾರಿ ಮಾಡಲಾಗಿದೆ.<br><br>ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆಗೆ ನಿರುಪಯುಕ್ತ ಸಾಮಗ್ರಿಗಳ ಬಾಬ್ತು ಶೇ.18 ರಂತೆ ಜಿ.ಎಸ್.ಟಿ. ಸೇರಿದಂತೆ ಬರಬೇಕಾಗಿರುವ ರೂ.2.27 ಕೋಟಿಗಳನ್ನು ಪಾವತಿ ಮಾಡುವಂತೆ, ತಪ್ಪಿದಲ್ಲಿ ವಸೂಲಾತಿ ಸಂಬಂಧ ಕಾನೂನು ಕ್ರಮಕೈಗೊಳ್ಳಲು ನ್ಯಾಯಾಲಯದ ಮೊರೆ ಹೋಗುವುದಾಗಿ ಖರೀದಿದಾರರಿಗೆ ತಿಳಿಸಿರುತ್ತಾರೆ.<br><br>ಇದಕ್ಕೆ ಪ್ರತಿಯಾಗಿ ಕಾರ್ಖಾನೆಯಿಂದಲೇ ಖರೀದಿದಾರರಿಗೆ ಬಾಕಿ ಬರಬೇಕಾಗಿರುತ್ತದೆ ಎಂದು ಖರೀದಿದಾರರು ಸಹ ವಕೀಲರ ಮೂಲಕ ಕಾರ್ಖಾನೆಗೆ ನೋಟಿಸ್ ನೀಡಿರುತ್ತಾರೆ.<br>ಈ ವಿಷಯವಾಗಿ, ಕಾರ್ಖಾನೆಯ ಆಡಳಿತ ಮಂಡಳಿ ಮತ್ತು ತಾಂತ್ರಿಕ ಸಮಿತಿಯು ಕೈಗೊಂಡ ನಿರ್ಣಯದ ಪ್ರಕಾರ ಏರ್ಪಟ್ಟಿರುವ ಒಪ್ಪಂದದಂತೆ ಕಾರ್ಖಾನೆ ಮತ್ತು ಖರೀದಿದಾರರು ಜಿಎಸ್‌ಟಿ ವಿಷಯವನ್ನು ಪರಸ್ಪರ ಒಮ್ಮತದ ಮೂಲಕ ಇತ್ಯರ್ಥಪಡಿಸಿಕೊಳ್ಳಬೇಕಾಗಿರುತ್ತದೆ. |
| (ಇ) | ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ ಬ್ರಹ್ಮಾವರದ ಗುಜರಿ ಮಾರಾಟದ ಟೆಂಡರ್ ಕಮ್ ಹರಾಜು ಪ್ರಕ್ರಿಯೆಯಲ್ಲಿ ಟೆಂಡರ್‌ನಲ್ಲಿ ಸೇರಿದ | ಕಾರ್ಖಾನೆಯ ತುಕ್ಕು ಹಿಡಿದು, ಹಾಳಾಗಿದ್ದ ಕಟ್ಟಡ ಮತ್ತು ಯಂತ್ರೋಪಕರಣಗಳನ್ನು ಟೆಂಡರ ಕಂ ಹರಾಜು ಮೂಲಕ ಖರೀದಿಸಿರುವ ಮೆ॥ ನ್ಯೂರಾಯಲ್ ಟ್ರೇಡರ್ಸ್ ಚೆನ್ನೈ ಇವರು ಕಾರ್ಖಾನೆಯಿಂದ ಎತ್ತುವಳಿ ಮಾಡಿರುವ ಗುಜರಿ ಸಾಮಗ್ರಿಗಳ |

| | | |
|---|---|---|
| | ಗುಜರಿ, ಮಾರಾಟದಲ್ಲಿ ಸರ್ಕಾರಕ್ಕೆ (ಜಿ.ಎಸ್.ಟಿ) ರೂಪದಲ್ಲಿ ಮತ್ತು ಸಕ್ಕರೆ ಕಾರ್ಖಾನೆಗೆ ವಂಚನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು? | ಬಾಬ್ತು ಜಿ.ಎಸ್.ಟಿ. ಸೇರಿ ಒಟ್ಟು ಮೊತ್ತ ರೂ.9.09 ಕೋಟಿಗಳನ್ನುಪಾವತಿಸಿರುತ್ತಾರೆ. ಈ ಪೈಕಿ ರೂ.1.75 ಕೋಟಿಗಳ ಜಿ.ಎಸ್.ಟಿ. ಮೊತ್ತವನ್ನು ಕಾರ್ಖಾನೆ ವತಿಯಿಂದ ಜಿ.ಎಸ್.ಟಿ. ಇಲಾಖೆಗೆ ಪಾವತಿ ಮಾಡಿರುತ್ತಾರೆ.<br><br>ಆದಾಗ್ಯೂ, ಕಾರ್ಖಾನೆಯ ನಿರುಪಯುಕ್ತ ಸಾಮಗ್ರಿಗಳ ಮಾರಾಟದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಮಾನ್ಯ ಎ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಉಡುಪಿ, ಇಲ್ಲಿ ಖಾಸಗಿ ದೂರು ದಾಖಲಾಗಿರುತ್ತದೆ. ಸದರಿ ದೂರಿನನ್ವಯ ಬ್ರಹ್ಮಾವರ ಪೊಲೀಸ್ ಠಾಣೆಯ ಉಪನಿರೀಕ್ಷಕರು ಕಾರ್ಖಾನೆಯಿಂದ ಮಾಹಿತಿ ಪಡೆದು ವಿಚಾರಣೆ ನಡೆಸುತ್ತಿದ್ದು, ವಿಚಾರಣೆ ಪ್ರಗತಿಯಲ್ಲಿರುತ್ತದೆ. ಈ ಖಾಸಗಿ ದೂರಿನ ಸಂಬಂಧ ಮಾನ್ಯ ನ್ಯಾಯಾಲಯವು ನೀಡುವ ತೀರ್ಪಿನಂತೆ ಮುಂದಿನ ಕ್ರಮಕೈಗೊಳ್ಳಲಾಗುವುದು.<br><br>ಇದಲ್ಲದೆ, ಕಾರ್ಖಾನೆಯ ಆಡಳಿತ ಮಂಡಳಿಯು 2021-22 ಮತ್ತು 2022-23ನೇ ಸಾಲುಗಳ ಲೆಕ್ಕಪರಿಶೋಧನಾ ವರದಿಯನ್ನು ನಿಗದಿತ ಅವಧಿಯಲ್ಲಿ ವಾರ್ಷಿಕ ಮಹಾಸಭೆಗೆ ಮಂಡನೆ ಮಾಡದೆ ಇರುವುದರಿಂದ ಕಾರ್ಖಾನೆಯ ಆಡಳಿತ ಮಂಡಳಿಯ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ಹಾಗೂ ನಿಯಮಗಳು, 1960 ರಲ್ಲಿನ ಅವಕಾಶಗಳ ರೀತ್ಯಾ ಕ್ರಮವಹಿಸಲಾಗುವುದು. |

ಸಂಖ್ಯೆ: ಸಿಐ 41 ಸಿ ಓಎಫ್ 2024

(ಶಿವಾನಂದ ಎಸ್ ಪಾಟೀಲ್)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು